# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 20-6-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


### ಯು.ಎಸ್. ಸೋಯಾಬೀನ್ ರಫ್ತು ದರ ಇಳಿಕೆ

ಜುಲೈ ತಿಂಗಳ ಶಿಪ್‌ಮೆಂಟ್‌ನ (ಚೀನಾಕ್ಕೆ) ಯು.ಎಸ್. ಸೋಯಾಬೀನ್ ದರ 4.7 ಶೇಕಡಾ ಇಳಿಕೆಯಾಗಿದೆ. ನಾಟಿ ಉತ್ತಮ ರೀತಿಯಲ್ಲಿ ಪ್ರಗತಿಯಾಗುತ್ತಿದ್ದು 88 ಶೇಕಡಾ ನಾಟಿಯಾಗಿದೆಯೆನ್ನಲಾಗಿದೆ. ಹವಾಮಾನ ಉತ್ತಮವಿದ್ದು ಬೆಳೆಯ ಉತ್ತಮ ಪ್ರಗತಿ ನಿರೀಕ್ಷೆಯಲ್ಲಿದೆ. ಇದರಿಂದ ದರ ದುರ್ಬಲವಿದ್ದು, ಜುಲೈ ಶಿಪ್‌ಮೆಂಟ್‌ನ 77 ಶೇಕಡಾ ಕವರೇಜ್ ಆಗಿದೆಯೆನ್ನಲಾಗಿದೆ.

### ಮೈಸೂರು, ಚಾಮರಾಜನಗರದಲ್ಲಿ ಜೋಳ ಏಕರೇಜ್ ಹೆಚ್ಚಳ

ಜೋಳದಿಂದ ಉತ್ತಮ ಆದಾಯವಿರುವುದರಿಂದ ಮೈಸೂರು, ಚಾಮರಾಜನಗರ ಪ್ರದೇಶಗಳಲ್ಲಿ ನಾಟಿ ಪ್ರದೇಶ ಹೆಚ್ಚಳವಾಗಿದೆಯೆನ್ನಲಾಗಿದೆ. ಮೈಸೂರಲ್ಲಿ 12000 ಹೆಕ್ಟೇರ್ ಹಾಗೂ ಚಾಮರಾಜನಗರದಲ್ಲಿ 4000 ಹೆಕ್ಟೇರ್ ಪ್ರದೇಶಗಳಲ್ಲಿ ಜೋಳ ಬೆಳೆಯಲಾಗುತ್ತಿದೆಯೆನ್ನಲಾಗಿದೆ.

### ವಿಯೆಟ್ನಾಂನ ಕಾಳುಮೆಣಸು ಉತ್ಪಾದನೆ ಇಳಿಕೆ

ವಿಯೆಟ್ನಾಂನ ಕಾಳುಮೆಣಸು ಉತ್ಪಾದನೆ ಈ ವರ್ಷ 10 ರಿಂದ 15 ಶೇಕಡಾ ಇಳಿಕೆಯಾಗಿ 1750000 ಟನ್‌ಗಳಾಗಬಹುದೆನ್ನಲಾಗಿದೆ. (ಹಿಂದಿನ ವರ್ಷಕ್ಕೆ ಹೋಲಿಸಿದಾಗ) ಇದರಿಂದ ವಿಯೆಟ್ನಾಂನ ಕಾಳುಮೆಣಸು ಆಮದು ಈ ವರ್ಷದ ಪ್ರಥಮ 4 ತಿಂಗಳಲ್ಲಿ 7 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ವಿಯೆಟ್ನಾಂ 12000 ಟನ್‌ಗಳಷ್ಟು ಕಾಳುಮೆಣಸು ಆಮದು ಮಾಡಿದೆಯೆನ್ನಲಾಗಿದೆ. ಪ್ರಮುಖ ಜಾಗತಿಕ ಬೆಳೆಯುವ ದೇಶಗಳಲ್ಲಿ ಉತ್ಪಾದನೆ ಕಡಿಮೆಯಾಗಿರುವುದರಿಂದ ಈ ವರ್ಷ ಕಾಳುಮೆಣಸು ಜಾಗತಿಕ ದರ ಹೆಚ್ಚಳವಿರಲಿದೆಯೆನ್ನಲಾಗಿದೆ.

### ಪ್ರಬಲ ಡಾಲರ್ ದರ ಹಾಗೂ ಯು.ಎಸ್ ನಲ್ಲಿ ಪೂರೈಕೆ ಹೆಚ್ಚಳದಿಂದ ಕಾಫಿ ದರ ಹಿನ್ನಡೆ

ಡಾಲರ್ ದರ ವರ್ಧನೆಯಿಂದ ಹಾಗೂ ಅಮೇರಿಕಾದಲ್ಲಿ ಕಾಫಿ ಪೂರೈಕೆ ಹೆಚ್ಚಳದಿಂದ ಅಂತರಾಷ್ಟ್ರೀಯ ಕಾಫಿ ದರ ಹಿನ್ನಡೆ ಕಂಡಿದೆ. ಅರೆಬಿಕಾ ಕಾಫಿ 1.85 ಶೇಕಡಾ ಹಾಗೂ ರಾಬೆಸ್ಟಾ ಕಾಫಿ 1.24 ಶೇಕಡಾ ಇಳಿಕೆಯಾಗಿದೆ. ಬ್ರೆಜಿಲ್‌ನಲ್ಲಿ ಒಣ ಹವೆ ಮುಂದುವರಿಕೆ ಕಾಫಿ ದರಕ್ಕೆ ಗುಣಾತ್ಮಕ ಅಂಶವಾಗಿದೆ ಹಾಗೂ ಜಾಗತಿಕ 2 ನೇ ಅತಿ ಹೆಚ್ಚು ಅರೆಬಿಕಾ ಕಾಫಿ ಉತ್ಪಾದಕ ರಾಷ್ಟ್ರ ಕೊಲಂಬಿಯಾದ ಉತ್ಪಾದನೆ ಇಳಿಕೆಯೂ ಪೂರಕ ಅಂಶವಾಗಿದೆ.

### ಕೇಂದ್ರ ಸರಕಾರದಲ್ಲಿ ರಾಜ್ಯಗಳಿಗೆ ವಿತರಿಸಲು ಕಡ್ಲೆಬೇಳೆ ಹೆಚ್ಚುವರಿ ದಾಸ್ತಾನು

ಕೇಂದ್ರ ಸರಕಾರ ರಾಜ್ಯಗಳಿಗೆ ವಿತರಿಸಲು ಹೆಚ್ಚಿನ ಕಡ್ಲೆಬೇಳೆ ದಾಸ್ತಾನು ಹೊಂದಿದೆಯೆನ್ನಲಾಗಿದೆ. ಅವಶ್ಯಕ ಮಟ್ಟಕ್ಕಿಂತ ಹೆಚ್ಚುವರಿ ದಾಸ್ತಾನು ಹೊಂದಿರುವುದರಿಂದ ರಾಜ್ಯಗಳಿಂದ ಬೇಡಿಕೆ ಬಂದಲ್ಲಿ ಕೇಂದ್ರ ರಾಜ್ಯಗಳಿಗೆ ಕಡ್ಲೆಬೇಳೆ ವಿತರಿಸಲು ಸಿದ್ಧವಿದೆಯೆನ್ನಲಾಗಿದೆ. 23 ಲಕ್ಷ ಟನ್‌ಗಳ ದಾಸ್ತಾನು (ಅವಶ್ಯಕ ಮಿತಿ) ಹೊಂದಬೇಕಿದ್ದು, ನಾಫೆಡ್‌ನಲ್ಲಿ 36 ಲಕ್ಷ ಟನ್‌ಗಳ ದಾಸ್ತಾನಿದೆಯೆನ್ನಲಾಗಿದೆ. ಇದರಲ್ಲಿ 27 ಲಕ್ಷ ಟನ್‌ಗಳು ಕಡ್ಲೆ ದಾಸ್ತಾನಿದೆಯೆನ್ನಲಾಗಿದೆ. ಭಾರತದ ಬೇಳೆಯ ಆಮದು 9 ಶೇಕಡಾ ಹೆಚ್ಚಳದೊಂದಿಗೆ 26.99 ಲಕ್ಷ ಟನ್‌ಗಳಾಗಿದೆಯೆನ್ನಲಾಗಿದೆ.

### ಚೀನಾ, ಭಾರತದಿಂದ ಅತಿಹೆಚ್ಚು ಕಡಿ ಅಕ್ಕಿ ಆಮದುದಾರ ದೇಶ

16.34 ಲಕ್ಷ ಟನ್ ಕಡಿ ಅಕ್ಕಿ(BROKEN RICE) ಆಮದು ಮಾಡುವ ಮೂಲಕ ಚೀನಾ ಭಾರತದಿಂದ ಅತಿಹೆಚ್ಚು ಅಕ್ಕಿ ಖರೀದಿಸಿದೆ(ಒಟ್ಟು ರಫ್ತಿನ 7.7 ಶೇಕಡಾ) ನೂಡಲ್ಸ್ ತಯಾರಿ ಹಾಗೂ ವೈನ್ ಉತ್ಪಾದನೆಗೆ ಉಪಯೋಗಿಸಲು ಚೀನಾದಲ್ಲಿ ಅಕ್ಕಿಗೆ ಹೆಚ್ಚಿನ ಬೇಡಿಕೆಯಿರುವುದರಿಂದ ಆಮದು ಹೆಚ್ಚಳವಾಗಿದೆಯೆನ್ನಲಾಗಿದೆ. ಇತರ ಆಹಾರ ಧಾನ್ಯಗಳ ಜಾಗತಿಕ ದರ ಹೆಚ್ಚಳವೂ ಹೆಚ್ಚು ಅಕ್ಕಿ ಆಮದಿಗೆ ಕಾರಣವಾಗಿದೆಯೆನ್ನಲಾಗಿದೆ.